ಸಿಲಿಂಡರ್ ಸ್ಫೋಟಕ್ಕೆ ಅನೇಕ ಸಲ ಇಂತಹ ಅವಧಿ ಮೀರಿದ ದುರ್ಬಲ ಸಿಲಿಂಡರ್‌ಗಳೂ ಕಾರಣವಾಗಿರುತ್ತವೆ. ಒಂದು ಅಂದಾಜಿನ ಪ್ರಕಾರ ಮಾರುಕಟ್ಟೆಯಲ್ಲಿನ ಸುಮಾರು ಶೇ.810ರಷ್ಟು ಎಕ್ಸ್‌ಪೈರಿ ಆಗಿರುವ ಸಿಲಿಂಡರ್‌ಗಳು ವಿತರಣೆಯಲ್ಲಿವೆ. ನಮ್ಮ ಮನೆಗೆ ಬಂದು ಅಡುಗೆಮನೆಯಲ್ಲಿ ಕುಳಿತಿರುವ ಸಿಲಿಂಡರ್ ಸುರಕ್ಷಿತವೋ ಅಲ್ಲವೋ ಎಂದು ನೋಡಿಕೊಳ್ಳುವ ಜವಾಬ್ದಾರಿ ನಮ್ಮ ಮೇಲೂ ಇರುತ್ತದೆ.



ಚಿತ್ರದಲ್ಲಿ ಕಾಣುವ ಹಾಗೆ, ಸಿಲಿಂಡರ್‌ನ ಮೇಲ್ಭಾಗದ ರಿಂಗ್ ಅನ್ನು ಜೋಡಿಸಿರುವ ಮೂರು ಪಟ್ಟಿಗಳಲ್ಲಿ ಒಂದರ ಮೇಲೆ ಅದರ ಎಕ್ಸ್‌ಪೈರಿ ತಿಂಗಳನ್ನು ಎದ್ದು ಕಾಣುವ ಹಾಗೆ ನಮೂದಿಸಿರುತ್ತಾರೆ. ಇಲ್ಲಿರುವ ಸಿಲಿಂಡರ್ ಮೇಲೆ ಸಿ.17 ಎಂದು ಬರೆದಿದೆ. ಎಂದರೆ ಇದು 2017ರ ಸೆಪ್ಟೆಂಬರ್‌ವರೆಗೂ ಸುರಕ್ಷಿತ ಎಂದರ್ಥ. ಹೇಗೆ? ವರ್ಷವನ್ನು ನಾಲ್ಕು ಭಾಗಗಳನ್ನಾಗಿ ಮಾಡಿ, ತ್ರೈಮಾಸಿಕಕ್ಕೆ ಒಂದರಂತೆ, ಎ, ಬಿ, ಸಿ, ಮತ್ತು ಡಿ ಎಂದು ಹೆಸರಿಸಿರುತ್ತಾರೆ. ಉದಾಹರಣೆ ಎ ಎಂದರೆ ಜನವರಿಯಿಂದ ಮಾರ್ಚ್‌ವರೆಗೆ ಎಂದರ್ಥ. ನಂತರ ಇರುವ ಸಂಖ್ಯೆ ಇಸವಿಯ ಕೊನೆಯೆರಡು ಅಂಕೆಗಳನ್ನು ತೋರಿಸುತ್ತದೆ. ಜುಲೇಖಾ ಮನೆಯಲ್ಲಿದ್ದ ಸಿಲಿಂಡರ್ ಮೇಲೆ ಸಿ 10 ಎಂದಿತ್ತು. ಅದು ಸೆಪ್ಟೆಂಬರ್ 2010ಕ್ಕೇ ಎಕ್ಸ್‌ಪೈರ್ ಆಗಿತ್ತು. ಈ ಸಂಖ್ಯೆ ಎದ್ದು ಕಾಣುವ ಹಾಗೆ ಇದ್ದರೂ ಇದನ್ನು ಗುರುತಿಸುವ ಅರಿವು ನಮಗೆ ಇಲ್ಲದೇ ಹೋದರೆ, ಅಪಾಯ ಕಟ್ಟಿಟ್ಟ ಬುತ್ತಿ.

## ಪ್ಯಾಕಿನಲ್ಲಿ ಬರುವ ವಸ್ತುಗಳು

ಇತ್ತೀಚಿನ ದಿನಗಳಲ್ಲಿ ಬಹುತೇಕ ವಸ್ತುಗಳು ವಿವಿಧ ರೀತಿಯ ಡಬ್ಬಿಗಳು, ಬಾಟಲುಗಳು, ಜಾರ್‌ಗಳು ಮುಂತಾದ ಪ್ಯಾಕುಗಳಲ್ಲಿ ಬರುತ್ತಿವೆ. ತಿನ್ನುವ, ಕುಡಿಯುವ ವಸ್ತುಗಳಿಂದ ಹಿಡಿದು ಸೌಂದರ್ಯ ಸಾಧನಗಳು, ದವಸಧಾನ್ಯಗಳಿಂದ ಹಿಡಿದು ಹಣ್ಣು, ತರಕಾರಿ, ಮಾಂಸದ ವರೆಗೂ ಹೆಚ್ಚು ಕಡಿಮೆ ಎಲ್ಲಾ ಗ್ರಾಹಕವಸ್ತುಗಳು ಈಗ ಮೊದಲೇ ಮಾಡಿದ ಪ್ಯಾಕ್‌ಗಳಲ್ಲಿ ದೊರೆಯುತ್ತವೆ. ಇದರಿಂದ ಉತ್ಪಾದಕರು ಮತ್ತು ಮಾರಾಟಗಾರರಿಗೂ ಅನುಕೂಲ, ಗ್ರಾಹಕರಿಗಂತೂ ಅನೇಕ ಬಗೆಯ ಅನುಕೂಲಗಳು ಇವೆ.

ಗ್ರಾಹಕರಿಗೆ ಇರುವ ಮುಖ್ಯವಾದ ಅನುಕೂಲಗಳು ಎಂದರೆ, ಪ್ಯಾಕೇಜಿನಲ್ಲಿರುವ ವಸ್ತುಗಳ ತೂಕ ಮತ್ತು ಅಳತೆ ನಿಖರವಾಗಿರುತ್ತವೆ. ವಸ್ತುಗಳು ತಾಜಾ ಇವೆಯೇ ಎಂಬುದರ ಬಗ್ಗೆ ಮಾಹಿತಿ ಸಿಗುತ್ತದೆ. ನಿಗದಿತ ಬೆಲೆ ಗೊತ್ತಾಗುತ್ತದೆ; ಮುಖ್ಯವಾಗಿ ಅದನ್ನು ತಯಾರಿಸಿದವರು ಯಾರು ಎಂಬ ಮಾಹಿತಿ ದೊರೆಯುತ್ತದೆ. ಯಾವುದೇ ಬಗೆಯ ನ್ಯೂನತೆ ಕಂಡುಬಂದರೆ ಯಾರನ್ನು ಸಂಪರ್ಕಿಸಬಹುದು ಅನ್ನೋ ಮಾಹಿತೀನೂ ಇರುತ್ತದೆ. ಇದರಿಂದಾಗಿ ವಸ್ತುವಿನ ಪ್ರಮಾಣ ಮತ್ತು ಗುಣಮಟ್ಟದ ಕುರಿತು ಖಾತರಿ ಸಿಗುತ್ತದೆ.

ಈ ರೀತಿ ಪ್ಯಾಕೇಜುಗಳಲ್ಲಿ ನಾವು ನಿತ್ಯ ಕೊಳ್ಳುವ ಗ್ರಾಹಕ ವಸ್ತುಗಳ ಮೇಲೆ ಗ್ರಾಹಕರಿಗೆ ಪ್ರಯೋಜನಕ್ಕೆ ಬರುವ ಅನೇಕ ರೀತಿಯ ಮಾಹಿತಿಗಳು ಇರುತ್ತವೆ. ನಾವು ಅದನ್ನು ಗಮನಿಸುವುದಿಲ್ಲ. ಇದರಲ್ಲಿ ನಾವು ಗಮನಿಸಬೇಕಾದ ಒಂದೆರಡು ಮುಖ್ಯವಾದ ಅಂಶಗಳು ಎಂದರೆ ಎಕ್ಸ್‌ಪೈರಿ ದಿನಾಂಕ ಮತ್ತು ಗರಿಷ್ಠ ಮಾರಾಟದ ಬೆಲೆ(ಎಂಆರ್‌ಪಿ). ಎಕ್ಸ್‌ಪೈರಿ ದಿನಾಂಕವನ್ನು ಇಂತಿಷ್ಟು ತಾರೀಖು ಎನ್ನುವ ರೀತಿಯಲ್ಲಿ ಬರೆಯುತ್ತಾರೆ; ಅಥವಾ ಇಂತಹ ದಿನಾಂಕದ ಒಳಗೆ ಬಳಸುವುದು ಉತ್ತಮ (ಬೆಸ್ಟ್ ಬಿಫೋರ್) ಎನ್ನುವಂತೆ ಸೂಚಿಸಲಾಗಿರುತ್ತದೆ. ಆಹಾರ ಪದಾರ್ಥ, ಔಷಧಿ, ವೈದ್ಯಕೀಯ ಉಪಕರಣಗಳು ಇತ್ಯಾದಿಗಳ ವಿಚಾರದಲ್ಲಿ ಇದು ಬಹಳ ಮಹತ್ವದ್ದಾಗಿರುತ್ತದೆ. ಸುರಕ್ಷಿತ ಬಳಕೆಯ ಅವಧಿಯ ನಂತರ ಆಹಾರ ಪದಾರ್ಥಗಳು ವಿಷಕಾರಿಯಾಗಿ ಪರಿಣಮಿಸಬಹುದು; ಔಷಧಿಗಳು ಪರಿಣಾಮವನ್ನು ಕಳೆದುಕೊಳ್ಳಬಹುದು; ಇಲ್ಲವೇ ಅಡ್ಡಪರಿಣಾಮಗಳು ಉಂಟಾಗಬಹುದು. ಸೇವಿಸುವ ದೇಹ ಪ್ರಕೃತಿಗೆ ಅನುಗುಣವಾಗಿ ಹೊಟ್ಟೆಯಲ್ಲಿ ಕಿಸಿವಿಸಿಯಿಂದ ಹಿಡಿದು, ಅನಾರೋಗ್ಯ ಮತ್ತು ಸಾವಿನವರೆಗೂ ಪರಿಣಾಮಗಳು ಉಂಟಾಗಬಹುದು.

ಇನ್ನು ಎಂಆರ್‌ಪಿ ಅಥವಾ ಗರಿಷ್ಠ ಮಾರಾಟ ಬೆಲೆ. ಎಂಆರ್‌ಪಿಯಲ್ಲಿ ಮಾರಾಟಕ್ಕೆ ಸಂಬಂಧಿಸಿದ ಎಲ್ಲಾ ತೆರಿಗೆಗಳು ಸೇರಿರುತ್ತವೆ. ಎಂದರೆ ಚಿಲ್ಲರೆ ಮಾರಾಟಗಾರರೂ ಕೂಡ ಇದಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಅಪರಾಧ. ಕೆಲವೊಮ್ಮೆ ಈ ಗ.ಮಾ.ಬೆ.ಯನ್ನು




# ಶ್ರೀ ಪಂಚಮುಖಿ ಜ್ಯೋತಿಷ್ಯಂ



INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾ ದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450